ಗ್ರಾಮ ಪಂಚಾಯಿತಿಯ ಸಭೆಗಳಲ್ಲಿ ತಾಲ್ಲೂಕು ಪಂಚಾಯಿತಿ ಸದಸ್ಯರುಗಳು ಭಾಗವಹಿಸುವಿಕೆ

2426(2866); ಶ್ರೀ ಬಾಲಕೃಷ್ಣ ಹೆಚ್.ಸಿ. (ಮಾಗಡಿ)

ಅ) ಗ್ರಾಮ ಪಂಚಾಯತಿಯ ಸಾಮಾನ್ಯ ಸಭೆಗಳಲ್ಲಿ ತಾಲ್ಲೂಕು ಪಂಚಾಯಿತಿಯ ಸದಸ್ಯರುಗಳು ಭಾಗವಹಿಸಬಹುದೇ?

ಆ) ಹಾಗಿದ್ದಲ್ಲಿ, ಗ್ರಾಮ ಪಂಚಾಯತಿಯ ಸಾಮಾನ್ಯ ಸಭೆಗಳಲ್ಲಿ ಭಾಗವಹಿಸಲು ಯಾರ್ಯಾರಿಗೆ ಅವಕಾಶವಿದೆ?

ಶ್ರೀ ಹೆಚ್.ಕೆ. ಪಾಟೀಲ್ (ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು)

ಅ) –ಇಲ್ಲ–

ಆ) ಗ್ರಾಮ ಪಂಚಾಯತಿಯ ಸಾಮಾನ್ಯ ಸಭೆಗಳಲ್ಲಿ ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ, 1993 ರ ಪ್ರಕರಣ 52 ರಂತೆ ಗ್ರಾಮ ಪಂಚಾಯತಿ ಸದಸ್ಯರುಗಳು, ಸರ್ಕಾರ ಗೊತ್ತುಪಡಿಸಬಹುದಾಂಥ ಅಧಿಕಾರಿಗಳು ಮತ್ತು ಪಂಚಾಯತಿ ಪ್ರದೇಶದ ಮೇಲೆ ಅಥವಾ ಅದರ ಯಾವುದೇ ಭಾಗದ ಮೇಲೆ ಅಧಿಕಾರ ವ್ಯಾಪ್ತಿ ಹೊಂದಿರುವ ಇತರ ಸರ್ಕಾರಿ ಅಧಿಕಾರಿಗಳು ಗ್ರಾಮ ಪಂಚಾಯತಿಯ ಪ್ರತಿಯೊಂದು ಸಭೆಗೆ ಭಾಗವಹಿಸಲು ಅವಕಾಶ ಕಲ್ಪಿಸಲಾಗಿದೆ.

ಸರ್ಕಾರಿ ಪದವಿ ಪೂರ್ವ ಕಾಲೇಜು

2427(2867); ಶ್ರೀ ಬಾಲಕೃಷ್ಣ ಹೆಚ್.ಸಿ (ಮಾಗಡಿ)

ಅ) ರಾಮನಗರ ತಾಲ್ಲೂಕು ಕೂಟಗಲ್ ಹೋಬಳಿ, ಜಾಲಮಂಗಲ ಸರ್ಕಾರಿ ಪದವಿ ಪೂರ್ವ ಕಾಲೇಜಿನ ಕಟ್ಟಡದ ಕಾಮಗಾರಿಗಳು ಬಾಕಿ ಉಳಿದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಾದರೆ ಹೆಚ್ಚುವರಿ ಪರಿಮಾಣ ಮತ್ತು ಹೆಚ್ಚುವರಿ ಅಂಶಗಳಿಗೆ ಅನುಮೋದನೆಯನ್ನು ನೀಡಲು ಸರ್ಕಾರವು ಕೈಗೊಂಡಿರುವ ಕ್ರಮವೇನು;

ಇ) ಗಣ್ಯತೆಗೆದಾರರಿಗೆ ಪಾಠವನ್ನು ಪಾವತಿಸಲು ಸರಕಾರವು ಕೈಗೊಂಡಿರುವ ಕ್ರಮವೇನು?

ಶ್ರೀ ಕಿಮ್ಮನೆ ರತ್ನಾಕರ್ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ರಾಜ್ಯ ಸಚಿವರು)

ಅ) [illegible]

ಆ) ಹೆಚ್ಚುವರಿ ಕಾಮಗಾರಿ ಪರಿಮಾಣ ಮತ್ತು ಹೆಚ್ಚುವರಿ ಅಂಶಗಳ ಅನುಮೋದನೆಯನ್ನು ಕೋರಿ ಮುಖ್ಯ ಅಭಿಯಂತರರು ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ. ಸದರಿ ಅಂಶಗಳನ್ನು ಮತ್ತು ಕಾಮಗಾರಿಯ ಪರಿಮಾಣಗಳಿಗೆ ಸ್ಥಳೀಯ ಅನುಮೋದನೆಯನ್ನು ಕೊಡುವ ಕುರಿತು ಪರಿಶೀಲನೆಯಲ್ಲಿದೆ.

ಇ) ಸರ್ಕಾರಿ ಪದವಿ ಪೂರ್ವ ಕಾಲೇಜು, ಜಾಲಮಂಗಲ, ಕಾಮನಗರ ಜಿಲ್ಲೆ ಈ ಕಾಲೇಜಿಗೆ ಅಪೆಂಡಿಕ್ಸ್-ಇ ಯೋಜನೆಯಡಿ ₹ 100.00 ಲಕ್ಷರೂಪಾಯಿಗಳ ವೆಚ್ಚದಲ್ಲಿ ಪೂರ್ಣ ಪ್ರಮಾಣದ ಕಟ್ಟಡವನ್ನು ನಿರ್ಮಿಸಲು ಅನುಮತಿಯನ್ನು ನೀಡಲಾಗಿತ್ತು. ಆದರೆ ತಾಂತ್ರಿಕ ಕಾರಣಾಂತರದಿಂದ ಸದರಿ ಕಾಮಗಾರಿಯು ₹ 175.00 ಲಕ್ಷರೂಪಾಯಿಗಳಿಗೆ ಪೂರ್ಣಗೊಂಡಿರುತ್ತದೆ. ಆದ್ದರಿಂದ ಈ ಕಾಲೇಜಿಗೆ ಪ್ರಾಂಶುಪಾಲರ ಬೇಡಿಕೆಯಂತೆ ಆರ್.ಐ.ಡಿ.ಎಫ್ ಯೋಜನೆಯಡಿ ಇನ್ನೊಂದು ಕಟ್ಟಡವನ್ನು ನೀಡಿದ್ದು, ಕಾಮಗಾರಿ ಪೂರ್ಣಗೊಂಡು ಉಪಯೋಗಕ್ಕೆ ಪಡೆಯಲಾಗಿದೆ.

ಅಪೆಂಡಿಕ್ಸ್-ಇ ಯೋಜನೆಯಡಿಯ ಕಾಮಗಾರಿಗೆ ₹ 75.00 ಲಕ್ಷರೂಪಾಯಿಗಳಿಗೆ ಹೆಚ್ಚುವರಿ ಪರಿಮಾಣಕ್ಕೆ ಮತ್ತು ಹೆಚ್ಚುವರಿ ಅಂಶಗಳಾಗಿದ್ದು, ಅನುಮೋದನೆಯನ್ನು ಕೋರಿರುತ್ತಾರೆ. ಹೆಚ್ಚುವರಿ ಪರಿಮಾಣ ಮತ್ತು ಅಂಶಗಳಿಗೆ ಅನುಮೋದನೆಯನ್ನು ನೀಡುವ ಕುರಿತು ಪ್ರಸ್ತಾವನೆಯನ್ನು ಪರಿಶೀಲಿಸಲಾಗುತ್ತಿದೆ.